# ಪ್ರಧಾನಿ ಕಾಜಾ

■ ಪ್ರವೀಣ ಕುಲಕರ್ಣಿ



ಬಾಲ್ಟಿಕ್ ಸಮುದ್ರದ ದಂಡೆಯಗುಂಟ ಹರಡಿಕೊಂಡಿರುವ ಉತ್ತರ ಯುರೋಪ್‌ನ ಪುಟ್ಟ ದೇಶ ಎಸ್ಟೋನಿಯಾ. ಈ ದೇಶದ ಹೆಸರು ನಿನ್ನೆ–ಮೊನ್ನೆಯವರೆಗೆ ಹೆಚ್ಚಿನ ಜನರ ಕಿವಿಗೆ ಬಿದ್ದಿರಲಿಲ್ಲ. ಅದರ ಒಂದು ಕಡೆ ಫಿನ್ಲೆಂಡ್‌ನ ಸಮುದ್ರ ತೀರವಿದ್ದರೆ, ಇನ್ನೊಂದೆಡೆ ಲ್ಯಾಟ್ವಿಯಾ ದೇಶವಿದೆ. ಸೋವಿಯತ್ ರಷ್ಯಾದ ಹಿಡಿತದಿಂದ ಹೊರಬಂದ ಈ ಪುಟ್ಟ ದೇಶ, ಇತ್ತೀಚಿನವರೆಗೆ ಸದ್ದು ಮಾಡದೆ, ಸುದ್ದಿಯಾಗದೆ ತನ್ನ ಪಾಡಿಗೆ ತಾನು ತಣ್ಣಗಿತ್ತು. ಆದರೆ, ಕಳೆದ ವಾರ ರಾಷ್ಟ್ರದ ಪ್ರಥಮ ಮಹಿಳಾ ಪ್ರಧಾನಿಯನ್ನು ಕಂಡಿರುವ ಎಸ್ಟೋನಿಯಾ ಜಗತ್ತಿನ ಗಮನಸೆಳೆದಿದೆ.

ಕೇವಲ 43ರ ಹರೆಯದ ಕಾಜಾ ಕಲ್ಲಾಸ್ ಎಸ್ಟೋನಿಯಾದ ಮೊದಲ ಮಹಿಳಾ ಪ್ರಧಾನಿ ಎಂಬ ಹಿರಿಮೆಗೆ ಪಾತ್ರರಾಗಿದ್ದಾರೆ. ಆ ಮೂಲಕ ಸಿರಿಮಾವೊ ಬಂಡಾರನಾಯಕೆ, ಇಂದಿರಾ ಗಾಂಧಿ, ಮಾರ್ಗರೇಟ್ ಥ್ಯಾಚರ್, ಬೆನಜಿರ್ ಭುಟ್ಟೊ, ಖಾಲಿದಾ ಜಿಯಾ ಅವರಂತಹ ಜಾಗತಿಕ ಗಣ್ಯರ ಗುಂಪಿನ ಸದಸ್ಯೆಯಾಗಿದ್ದಾರೆ. ವೃತ್ತಿಯಿಂದ ವಕೀಲೆಯಾಗಿರುವ ಕಾಜಾ, ಎಸ್ಟೋನಿಯಾದ ರಾಜಕೀಯಕ್ಕೆ ಈಗ ಹೊಸ ರಂಗು ತುಂಬಿದ್ದಾರೆ.

ಕಾಜಾ ಅವರ ಕುಟುಂಬಕ್ಕೆ ರಾಜಕೀಯದ ದೊಡ್ಡ ಹಿನ್ನೆಲೆ ಇದೆ. ಅವರ ತಂದೆ ಸಿಮ್ ಕಲ್ಲಾಸ್ ಕೂಡ ದೇಶದ ಪ್ರಧಾನಿ ಆಗಿದ್ದವರು. ಕಾಜಾ ಅವರ ಅಜ್ಜ (ಅಮ್ಮನ ತಂದೆ) ಎಡ್ವರ್ಡ್ ಅಲ್ವರ್ ಅವರು ಎಸ್ಟೋನಿಯಾ ರಾಷ್ಟ್ರಜನಕರಲ್ಲಿ ಒಬ್ಬರು. ಎಸ್ಟೋನಿಯಾ ಸ್ವತಂತ್ರ ರಾಷ್ಟ್ರವಾಗಿ ರೂಪುಗೊಂಡಾಗ ಅದರ ಮೊದಲ ಪೊಲೀಸ್ ಮುಖ್ಯಸ್ಥರಾಗಿಯೂ ಅವರು ಕಾರ್ಯ ನಿರ್ವಹಿಸಿದವರು. ಹೀಗಾಗಿ ಕಾಜಾ ಪಾಲಿಗೆ ರಾಜಕೀಯ ಎನ್ನುವುದು ರಕ್ತಗತವಾಗಿ ಬಂದ ಬಳುವಳಿ.

ಕಾಜಾ, 2018ರಲ್ಲಿ 'ರಿಫಾರ್ಮ್' ಪಕ್ಷದ ಚುಕ್ಕಾಣಿ ಹಿಡಿಯುವ ಮುನ್ನ ಯುರೋಪಿಯನ್ ಪಾರ್ಲಿಮೆಂಟ್‌ನ ಸದಸ್ಯೆಯಾಗಿ ಕೆಲಸ ಮಾಡಿದ್ದರು. ಆರ್ಥಿಕ ವ್ಯವಹಾರಗಳ ಸಮಿತಿ ಅಧ್ಯಕ್ಷೆಯಾಗಿ ಸೇವೆ ಸಲ್ಲಿಸಿದ್ದರು. ಕೈಗಾರಿಕೆ, ಸಂಶೋಧನೆ ಹಾಗೂ ಇಂಧನ ಸಮಿತಿಯ ಸದಸ್ಯೆಯಾಗಿ ಕಾರ್ಯ ನಿರ್ವಹಿಸಿದ್ದರು. ಆಗ ಅವರ ಕಾರ್ಯವೈಖರಿ ಕಂಡು 'ಯುರೋಪಿನ ಯುವ ನಾಯಕಿ' ಪುರಸ್ಕಾರವನ್ನು ಅವರಿಗೆ ನೀಡಲಾಗಿತ್ತು. 2014ರಲ್ಲಿ ರಾಜಕೀಯಕ್ಕೆ ಧುಮುಕಿದ ಅವರು, ಕೇವಲ ಏಳು ವರ್ಷಗಳಲ್ಲಿ ಪ್ರಧಾನಿ ಹುದ್ದೆಗೇರಿರುವುದು ಎಲ್ಲರಲ್ಲೂ ಅಚ್ಚರಿ ಮೂಡಿಸಿದೆ.

ಮಾತೃಭಾಷೆ ಎಸ್ಟೋನಿಯನ್ ಮಾತ್ರವಲ್ಲದೆ ಫ್ರೆಂಚ್, ಇಂಗ್ಲಿಷ್ ಹಾಗೂ ರಷ್ಯನ್ ಭಾಷೆಗಳ ಮೇಲೂ ಪ್ರಭುತ್ವ ಹೊಂದಿರುವ ಕಾಜಾ ಅವರಿಗೆ ಪ್ರತಿದಿನ ನಸುಕಿನಲ್ಲಿ ಎದ್ದು ಜಾಗಿಂಗ್‌ಗೆ ಹೋಗುವುದೆಂದರೆ ತುಂಬಾ ಖುಷಿಯಂತೆ. ಈಗಾಗಲೇ ಎರಡು ಮದುವೆಗಳನ್ನು ಕಂಡಿರುವ ಅವರು, ಇಬ್ಬರು ಮಕ್ಕಳ ತಾಯಿಯೂ ಹೌದು. ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಮೊದಲ ಭಾಷಣದಲ್ಲಿ ಅವರಾಡಿದ ಮಾತುಗಳು ದೇಶದ ಭವಿಷ್ಯದ ಹಾದಿಗೆ ದಿಕ್ಸೂಚಿ. 'ಕೋವಿಡ್‌ಗೆ ಹೆದರಿ ಕೂರುವುದಿಲ್ಲ. ಕೈಗಾರಿಕೆಗಳು ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಬೇಕು. ಹಾಗೆಯೇ ಮಕ್ಕಳು ಶಾಲೆಗೆ ತೆರಳಬೇಕು. ಸಾಂಕ್ರಾಮಿಕವನ್ನು ನಿಯಂತ್ರಿಸುತ್ತಲೇ ನಾವು ಆರ್ಥಿಕವಾಗಿ ಬೆಳೆಯಬೇಕು' ಎನ್ನುತ್ತಾರೆ ಕಾಜಾ.

ಲಿಂಗ ಸಮಾನತೆಗಾಗಿ ಸದಾ ಹಂಬಲಿಸುವ ಈ ಯುವ ನಾಯಕಿ ತಮ್ಮ ಸಂಪುಟದ ಅರ್ಧದಷ್ಟು ಹುದ್ದೆಗಳನ್ನು ಮಹಿಳೆಯರಿಗೆ ಮೀಸಲಿಟ್ಟಿದ್ದಾರೆ. ಮಾನವ ಹಕ್ಕುಗಳ ಪ್ರಬಲ ಪ್ರತಿಪಾದಕಿಯೂ ಅವರಾಗಿದ್ದಾರೆ. ಯುರೋಪಿನ ಭರವಸೆಯ ರಾಜಕೀಯ ನಾಯಕಿಯಾಗಿ ಬೆಳೆಯುತ್ತಿರುವ ಕಾಜಾ, ಫ್ರೆಂಡ್ಸ್ ಆಫ್ ಯುರೋಪ್, ಯುರೋಪಿಯನ್ ಕೌನ್ಸಿಲ್ ಫಾರ್ ಫಾರೆನ್ ರಿಲೇಷನ್ಸ್, ವುಮೆನ್ ಎಕನಾಮಿಕ್ ಫೋರಂ, ಯುರೋಪಿಯನ್ ಲಿಬರಲ್ ಯೂತ್ ಮೊದಲಾದ ಸಂಘಟನೆಗಳ ಸಕ್ರಿಯ ಸದಸ್ಯೆಯೂ ಹೌದು.

ಕಾನೂನು ಪರಿಣಿತೆಯಾಗಿರುವ ಕಾಜಾ, ಡಿಜಿಟಲ್ ಸಿಂಗಲ್ ಮಾರ್ಕೆಟ್‌ನ ಪ್ರಬಲ ಪ್ರತಿಪಾದಕಿ. ಯುರೋಪಿಯನ್ ಪಾರ್ಲಿಮೆಂಟ್‌ನ ಡಿಜಿಟಲ್ ಅಜೆಂಡಾ ಸಮಿತಿಯ ಸದಸ್ಯೆಯಾಗಿ, ಡಿಜಿಟಲ್ ರೂಪುರೇಷೆ ಕುರಿತಂತೆ ವರದಿಯನ್ನು ಸಿದ್ಧಪಡಿಸಿದವರು ಅವರಾಗಿದ್ದಾರೆ. ಕರ್ನಾಟಕದ ಯಾವುದೋ ಒಂದು ಜಿಲ್ಲೆಯಷ್ಟು ಗಾತ್ರವನ್ನು ಎಸ್ಟೋನಿಯಾ ದೇಶ ಹೊಂದಿದೆ. ಅಲ್ಲಿನ ಜನಸಂಖ್ಯೆ 13.20 ಲಕ್ಷ. ಆದರೆ, ತಲಾ ಆದಾಯದ ವಿಷಯದಲ್ಲಿ ಈ ದೇಶ ತುಂಬಾ ಮುಂದಿದೆ. ಕಾಜಾ ರೂಪದಲ್ಲಿ ಸಿಕ್ಕಿರುವ ಸ್ಫುರದ್ರೂಪಿ ಪ್ರಧಾನಿಯಿಂದ ಭವಿಷ್ಯ ಉಜ್ವಲವಾಗಲಿದೆ ಎಂದು ಆ ದೇಶದ ಜನ ನಿರೀಕ್ಷೆ ಇಟ್ಟುಕೊಂಡಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65